ನಮ್ಮನ್ನು ಏರ್‌ಪೋರ್ಟ್‌ಗೆ ಬಿಡಲು ಮಹಮ್ಮದ್ ಪೈಲ್ವಾನ್ ಮತ್ತು ಕರುಣಾಕರ ನಾಯರ್ ಇಬ್ಬರೂ ಬಂದಿದ್ದರು. ವಿಶಾಖಪಟ್ಟಣದಲ್ಲಿ ವಿಮಾನ ಇಳಿದಾಗ ನಮಗಾಗಿ ವಿಶ್ವನಾಥ ವೇಮುಲಶಾಸ್ತ್ರಿ ಕಾಯುತ್ತಿದ್ದ. ಅಲ್ಲಿಂದ ಚೆರ್ಲಪಲ್ಲಿಗೆ ಒಂದೂಕಾಲು ಗಂಟೆ ಪ್ರಯಾಣವೆಂದು ಹೇಳಿದ ವಿಶ್ವನಾಥ ವೇಮುಲಶಾಸ್ತ್ರಿ ಇನ್ನೋವಾ ಕಾರಿನಲ್ಲಿ ಹಿಂದಿನ ಸೀಟಿನಲ್ಲಿ ನನ್ನೊಂದಿಗೆ ಕುಳಿತರೆ ನರಸಿಂಹರೆಡ್ಡಿಯವರು ಮುಂದೆ ಡ್ರೈವರ್ ಪಕ್ಕದ ಸೀಟಿನಲ್ಲಿ ಕುಳಿತಿದ್ದರು. ಏರ್‌ಪೋರ್ಟ್ ಒಳಗಡೆಯಿಂದ ಕಾರಿನವರೆಗೆ ಬರುವಷ್ಟರಲ್ಲಿ ಏಳೆಂಟು ಜನ ನರಸಿಂಹರೆಡ್ಡಿಯವರಿಗೆ ನಮಸ್ಕಾರ ಮಾಡಿದ್ದರು. ಒಂದೂಕಾಲು ಗಂಟೆಯ ಪ್ರಯಾಣದುದ್ದಕ್ಕೂ ಸಾವಿರಾರು ಎಕರೆ ಭತ್ತದ ಗದ್ದೆಗಳು, ಕಬ್ಬಿನ ತೋಟಗಳು, ತೆಂಗಿನ ಮರಗಳು ಹಸಿರು ಕಕ್ಕುತ್ತಿದ್ದವು. ಕಾಲುವೆಗಳಲ್ಲಿ ಹರಿಯುತ್ತಿದ್ದ ಜುಳು ಜುಳು ನೀರಿನ ಸದ್ದು ಕಿವಿಗಳಲ್ಲಿ ತುಂಬಿಕೊಳ್ಳುತ್ತಿತ್ತು. ತುಂಬಾ ವಿಸ್ತಾರವಾದ ಆ ಮನೆಯ ಮುಂದೆ ನಿಂತಾಗ ಅಚ್ಚರಿಯಾಗಿತ್ತು ನನಗೆ. ಅಂಥ ದೊಡ್ಡದಾದ, ವಿಸ್ತಾರವಾದ ಮನೆಯನ್ನು ನಾನು ಇದುವರೆಗೂ ನೋಡಿದವನೇ ಅಲ್ಲ. ಮನೆಯ ಸುತ್ತಲೂ ಕಣಗಳು, ಆಲೆಮನೆಗಳು, ದನಕರುಗಳನ್ನು ಕಟ್ಟುತ್ತಿದ್ದ ವಿಶಾಲವಾದ ಕೊಟ್ಟಿಗೆಗಳು ಮತ್ತು ಆಳುಕಾಳುಗಳ ಕ್ವಾರ್ಟರ್ಸ್‌ಗಳು. ಅವುಗಳನ್ನೆಲ್ಲ ತನ್ನ ಬಾಹುಬಂಧನದಲ್ಲಿಟ್ಟುಕೊಂಡ ಸುಮಾರು ನಾಲ್ಕು ಎಕರೆ ವ್ಯಾಪಿಸಿದ ದೊಡ್ಡ ಕಲ್ಲಿನ ಕಾಂಪೌಂಡ್. ಕಾರು ಇಳಿದ ತಕ್ಷಣ ಇಬ್ಬರು ಮೇಳದವರು, "ನನ್ನು ದೋಚುಕುಂದವಟೆ ಓ ವೆನ್ನೆಲ ದೊರೆಸಾನಿ..." ಎಂಬ ತೆಲುಗು ಹಾಡನ್ನು ಮನೋಜ್ಞವಾಗಿ ನುಡಿಸುತ್ತಾ ಸ್ವಾಗತಿಸಿದ್ದರು. ನಾನು ನಿಜಕ್ಕೂ ಪುಳಕಿತನಾಗಿದ್ದೆ.

"ತಲೆಬಾಗಿಲೂ ಸೇರಿ ಈ ಮನೆಗೆ ಒಟ್ಟು ಅರವತ್ತೂರು ಬಾಗಿಲುಗಳಿವೆ. ನಮಗೆ ಒಂಬತ್ತನೇ ಅಂಕಿ ಚೆನ್ನಾಗಿ ಒದಗಿ ಬರುತ್ತದೆ. ಇಲ್ಲಿ ನಮ್ಮ ಕುಟುಂಬದ ಹೆಸರಿನಲ್ಲಿರುವ ಒಟ್ಟು ಜಮೀನು ಒಂಬೈನೂರ ತೊಂಬತ್ತೊಂಬತ್ತು ಎಕರೆಗಳು. ಎನ್ಟಿಆರ್ ಕೂಡ ಒಂಬತ್ತನೇ ಅಂಕಿಯನ್ನು ತುಂಬಾ ಇಷ್ಟಪಡುತ್ತಿದ್ದರು. ನಾನು ಡಿಗ್ರಿ ಓದುವಾಗ. ಎನ್ಟಿಆರ್, ಎ.ಎನ್.ಆರ್ ಇಬ್ಬರೂ ಮೂರ್ನಾಲ್ಕು ಬಾರಿ ಸಿನಿಮಾ ಶೂಟಿಂಗ್‌ಗಾಗಿ ಇಲ್ಲಿ ಬಂದು ವಾರಗಟ್ಟಲೆ ಉಳಿದುಕೊಂಡಿದ್ದರು..." ಎಂದು ಮುಖ್ಯ ಬಾಗಿಲನ್ನು ಪ್ರವೇಶ ಮಾಡುವಾಗ ಹೇಳಿದ ಮಾತುಗಳಲ್ಲಿ ಹೆಮ್ಮೆಯಿತ್ತು. "ಕುಟುಂಬದ ಹೆಸರಿನಲ್ಲಿ ಇಲ್ಲದ ಜಮೀನು ಹತ್ತಿರ ಹತ್ತಿರ ಐನೂರು ಎಕರೆಗಳಷ್ಟು ಇದೆ..." ವೇಮುಲಶಾಸ್ತ್ರಿ ಕಿವಿಯ ಹತ್ತಿರ ಪಿಸುಗುಟ್ಟಿದ್ದ.

ಮನೆಯಲ್ಲಿ ನಮಗೆ ಕಾಯ್ದಿರಿಸಿದ್ದ ಅತಿಥಿ ಕೊಠಡಿ ಯಾವ ಸ್ಟಾರ್ ಹೋಟೆಲ್ ರೂಮಿಗಿಂತಲೂ ಕಡಿಮೆಯಿರಲಿಲ್ಲ. ಎರಡು ಬಿಸಿಬಿಸಿ ಕಡಬು ತಿಂದು ಘಮ್ಮೆನ್ನುವ ಕಬ್ಬಿನ ಹಾಲು ಕುಡಿದು ಮನೆಯಲ್ಲಿಯೇ ಇಪ್ಪತ್ತೈದು ಬಾಗಿಲುಗಳನ್ನು ತಟಾಯಿಸಿ ವೀರಾಂಜನೇಯರೆಡ್ಡಿ ಇರುವ ವಿಶಾಲವಾದ ರೂಮನ್ನು ಪ್ರವೇಶಿಸಿದ್ದೆವು. ವೀರಾಂಜನೇಯರೆಡ್ಡಿ ಕಾಲು ಚಾಚಿ ಮಲಗಿದ್ದವರು ಎದ್ದು ಕುಳಿತರು. ಐದು ಅಡಿಗಳಿಗಿಂತಲೂ ಕಡಿಮೆ ಉದ್ದವಿರುವಂತೆ ಕಾಣುತ್ತಿದ್ದ ವೀರಾಂಜನೇಯರೆಡ್ಡಿಯ ಕಣ್ಣುಗಳು ಮಾತ್ರ ಬೆಕ್ಕಿನ ಕಣ್ಣುಗಳಂತೆ ಅತ್ಯಂತ ಸೂಕ್ಷ್ಮವಾಗಿದ್ದವು. ನರಸಿಂಹರೆಡ್ಡಿ ಮತ್ತು ವಿಶ್ವನಾಥ ವೇಮುಲಶಾಸ್ತ್ರಿ ಇಬ್ಬರೂ ವೀರಾಂಜನೇಯರೆಡ್ಡಿ ಪಾದ ಮುಟ್ಟಿ ನಮಸ್ಕರಿಸಿದ್ದರು. ನನಗೂ ಒಂದು ರೀತಿಯ ಭಯ ಆವರಿಸಿದಂತಾಗಿ ನನಗರಿಯದೆಯೇ ವೀರಾಂಜನೇಯರೆಡ್ಡಿಯ ಪಾದಗಳಿಗೆ ಎರಗಿದ್ದರ ಹಿಂದೆ ಬೆಂಗಳೂರಿನ ಅರ್ಧ ಎಕರೆ ಜಮೀನಿನ ಆಸೆಯೂ ಇದ್ದಿರಬಹುದೆಂಬ ಸತ್ಯವನ್ನೂ ಅಲ್ಲಗೆಳೆಯುವಂತಿರಲಿಲ್ಲ. ನಾನು ಪ್ರತಾಪಸಿಂಹರೆಡ್ಡಿಯ ವಿಷಯದಲ್ಲಿ ಕೃಷ್ಣ ಮನೋಹರನಿಗೆ ಹೇಳಿ ಮಾಡಿಸಿದ ಸಹಾಯವನ್ನು ನರಸಿಂಹರೆಡ್ಡಿ ತನ್ನ ಅಣ್ಣನಿಗೆ ಹೇಳಿದ್ದರು. ನಂತರ ಬೆಂಗಳೂರಿನ